ಅನುಬಂಧ—೨

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಹೊಸದಾಗಿ ಕಟ್ಟಿಸಿರುವ ಉಗ್ರಾಣಗಳ ಸಂಖ್ಯೆ	ಶೇಖರಿಸಿಡಬಹುದಾದ ಸಾಮರ್ಥ್ಯ (ಎಂ.ಟಿ)
೧	ಬೆಂಗಳೂರು (ನಗರ)	೩೨	೭,೭೦೦
೨	ಬೆಂಗಳೂರು (ಗ್ರಾ)		
೩	ಕೋಲಾರ	೪೭	೮,೭೦೦
೪	ತುಮಕೂರು	೫೮	೧೦,೫೦೦
೫	ಚಿತ್ರದುರ್ಗ	೩೪	೯,೩೦೦
೬	ಶಿವಮೊಗ್ಗ	೨೨	೭,೫೦೦
೭	ಮೈಸೂರು	೨೯	೭,೯೦೦
೮	ಮಡಕೇರಿ	೧೭	೨,೫೦೦
೯	ಹಾಸನ	೭	೧,೦೦೦
೧೦	ಚಿಕ್ಕಮಗಳೂರು	೧೫	೭,೯೦೦
೧೧	ಮಂಡ್ಯ	೩೦	೪,೭೦೦
೧೨	ದಕ್ಷಿಣ ಕನ್ನಡ	೫೮	೭,೪೦೦
೧೩	ಬೆಳಗಾಂ	೮೮	೧೭,೧೦೦
೧೪	ಧಾರವಾಡ	೬೧	೧೪,೮೦೦
೧೫	ಬಿಜಾಪುರ	೨೬	೭,೧೦೦
೧೬	ಉತ್ತರ ಕನ್ನಡ	೩೪	೬,೦೦೦
೧೭	ಗುಲ್ಬರ್ಗಾ	೧೪	೩,೯೮೦
೧೮	ರಾಯಚೂರು	೧೪	೧೮,೮೦೦
೧೯	ಬಳ್ಳಾರಿ	೩೫	೮,೦೦೦
೨೦	ಬೀದರ್	೨೮	೩,೩೦೦
	ಒಟ್ಟು	೬೪೭	೧,೪೪,೨೦೦

ಮೈಸೂರು–ಬೆಂಗಳೂರು ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾಡುವ ಕುರಿತು

೧೧೩. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).— ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು–ಬೆಂಗಳೂರು ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?

ಆ) ಹಾಗಿದ್ದಲ್ಲಿ ಈವರೆವಿಗೆ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ಹಾಗೂ ಸದರಿ ಜೋಡಿ ರಸ್ತೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಮಂತ್ರಿಯವರು).—

ಅ) ಮೈಸೂರು–ಬೆಂಗಳೂರು ಮಧ್ಯೆ ನಾಲ್ಕು ಲೇನಿನ ‘‘ಎಕ್ಸ್‌ಪ್ರೆಸ್ ವೇ ನಿರ್ಮಿಸಲು’’ ಯೋಜಿಸಲಾಗಿದೆ.

ಆ) ಸದರಿ ನಗರಗಳ ಮಧ್ಯೆ ಎಕ್ಸ್‌ಪ್ರೆಸ್ ವೇಯನ್ನು ನಿರ್ಮಿಸಲು ‘‘ಟರ್ನ್‌ಕೀ’’ ಆಧಾರದ ಮೇಲೆ ಗುತ್ತಿಗೆಗಳನ್ನು ಸ್ವೀಕರಿಸಲು ದಿನಾಂಕ ೩–೧೦–೧೯೮೮ ರಂದು ಒಂದು ಅಧಿಸೂಚನೆಯನ್ನು ಹೊರಡಿಸಿದೆ. ಗುತ್ತಿಗೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು ೧೫–೩–೧೯೮೯ರ ವರೆಗೆ ವಿಸ್ತರಿಸಲಾಗಿದೆ. ಉದ್ಯಮವಾದಾರದಿಂದ ಬರುವ ಸಮಂಜಸ ಪ್ರತಿಕ್ರಿಯೆಯನ್ನು ಆಧರಿಸಿ ೧೯೯೦ನೇ ವರ್ಷದಲ್ಲಿ ಈ ರಸ್ತೆಯನ್ನು ಪ್ರಾರಂಭಿಸುವ ಸಾಧ್ಯತೆ ಇದ್ದು ಐದು ವರ್ಷಗಳಲ್ಲಿ ಮುಗಿಯಬಹುದೆಂದು ಅಂದಾಜಿಸಲಾಗಿದೆ.